ಎಲ್ಲರ ಹಚಾ ಹುಚಾಕ್ಕೆ ಅವನು ತತ್ತರಿಸಿ ಹೋದ. ಇದಕ್ಕಿಂತ ಹೆಚ್ಚಾಗಿ ತನ್ನ ಕೆಲಸ ಆಗತದೋ ಇಲ್ಲೋ ಅನ್ನೋ ದಿಗಿಲು. ಕೊನೆಗೆ ಸೋತು ತಗ್ಗಿದ, ಬಗ್ಗಿದ–ಶರಣಾಗತಿ ಪ್ರಕಟಿಸಿದ. ಆವತ್ತು ಅವನ ರೊಕ್ಕದೊಳಗೇ ಆಫೀಸಿನ ಮಂದೀಗೆಲ್ಲ ಪಕ್ಕದ ಕಾಮತ್ ಹೋಟೆಲ್ಲಿಂದ ಶಿರಾ, ದ್ವಾಸಿ, ಚಹಾ ಸಮಾರಾಧನೆ ಆದಮ್ಯಾಲs ಅವನ ಫೈಲಿಗೆ ಸಹಿ, ಸಿಕ್ಕಾ ಬಿದ್ದದ್ದು. ಎಲ್ಲಾ ಮುಗಿದ ಮೇಲೆ ಶಿವಪ್ಪ ಮಾರಿ ಅಗಲಿಸಿ 'ಅಂವ ಅಷ್ಟು ಬೈದಿದ್ದಕ್ಕೆ ಇಷ್ಟಾದರೂ ಪ್ರಾಯಶ್ಚಿತ್ತ ಮಾಡಿಸದಿದ್ದರೆ ಹ್ಯಾಂಗ!' ಎಂದು ಎಲ್ಲರ ಮುಂದೆ ಹೇಳಿ ಧಾರಾಳವಾಗಿ ನಕ್ಕಿದ್ದ.

ಆವತ್ತಿನ ಘಟನೆಯಿಂದ ಶರಣಪ್ಪ ಹೊಸ ಪಾಠವೊಂದು ಕಲಿತ. ಅದೇನಪಾ ಅಂತಂದ್ರ ಭ್ರಷ್ಟರೊಳಗೂ ಒಂದು ನಿಯತ್ತಿರ್ತದ. ಒಬ್ಬ ಭ್ರಷ್ಟ ಇನ್ನೊಬ್ಬ ಭ್ರಷ್ಟನನ್ನು ಬಿಟ್ಟುಕೊಡೂದಿಲ್ಲ. ತುಳೀಲಿಕ್ಕೆ ಎಂದೂ ಪ್ರಯತ್ನ ಪಡೂದಿಲ್ಲ. ರಕ್ಷಿಸಬೇಕು ಅನ್ನುವ ಕಡೇನೇ ಅವನ ಲಕ್ಷ್ಯ!

★★★

ರಾತ್ರಿ ನಾಯಿ ಬೊಗಳಿದ್ದು ಕೇಳಿ ಶರಣಪ್ಪನಿಗೆ ಎಚ್ಚರಾತು.

ಹೆಂಡತಿ ಅಷ್ಟು ದೂರ ಇನ್ನೊಂದು ಕಾಟಿನ ಮ್ಯಾಲ ಮಲಗಿ ಗೊರಕಿ ಹೊಡಿಲಿಕ್ಕೆ ಹತ್ತಿದ್ದು ನೋಡಿ ಒಂದು ಕ್ಷಣ ಹೊಟ್ಟೆ ಉರಿದು ಹೋತು. ಎದ್ದು ಕೂತು ನಿರಾಸೆಯಿಂದ ತನ್ನ ಬೆಡ್ಡಿನ ಮ್ಯಾಲ ಹಗುರಾಗಿ ಕೈಯಾಡಿಸಿದ. ಇಪ್ಪತ್ತು ಕಿಲೋ ಅರಳೆಯ ಗಾದಿ ಅದು. ಹೊಲಿಸಿದಾಗ ಎಂಥ ಸುಖ ಇತ್ತು. ಆದರೆ ಈಗ? 'ನಿಮ್ಮ ಹತ್ರ ಮಲಗಿದರೆ ಅಸಾಧ್ಯ ಶಕೀ' ಎನ್ನುತ್ತ ಹೆಂಡತಿ ಬ್ಯಾರೆ ಮಲಗುತ್ತ ನಾಕು ವರ್ಷಗಳೇ ಕಳೆದಿರಬೇಕೇನೋ. ಈಗೇಗಿದ್ರೂ ಕೇಳಿದಾಗ ರೊಕ್ಕ ಕೊಡಲಿಕ್ಕೆ ಮಾತ್ರ ಗಂಡ, ಉಳಿದಂತೆ ಏನೂ ಉಪಯೋಗ ಇಲ್ಲವೆಂದು ತೀರ್ಮಾನಿಸಿ ಬಿಟ್ಟಹಾಂಗ ಕಾಣಸ್ತದ. ಆವಾಗಿಂದ ಇವತ್ತಿನ ತನಕ ಒಂದಿವಸಾನರೇ ಗಂಡನ ಕಷ್ಟ ಸುಖ ವಿಚಾರಿಸಲಿಲ್ಲ. ಬೇಕು ಬ್ಯಾಡ ಕೇಳಲಿಲ್ಲ. ತನ್ನ ತಾಪ, ಪರಿತಾಪಗಳ ಕಡೆ ಈಕೀಗೆ ಲಕ್ಷ್ಯಾನ ಇಲ್ಲ ಎಂದು ಶರಣಪ್ಪ ಮನಸ್ಸಿನೊಳಗ ಕನಲಿದ. ಆಮ್ಯಾಲ ವೇದಾಂತಿಯಂತೆ ಬಹುಶಃ ವಯಸ್ಸಾದ ಹಂಗೆಲ್ಲ ಸಂಬಂಧಗಳು ಹೀಂಗ ಶಿಥಿಲ ಆಗತಾನs ಹೋಗತಾವೋ ಏನೋ, ಅಕ್ಕರೇ ಆಸ್ಥೆಗಳು ಕಡಿಮೆ ಆಗತಾವೋ ಏನೋ, ಮಾತುಕತಿ ಎಲ್ಲ ಔಪಚಾರಿಕ ಮಟ್ಟಕ್ಕಿಂತ ಕೆಳಗೆ ಕುಸೀತಾವೋ ಏನೋ. ಇದೆಲ್ಲ ತಾನು ತನ್ನದೇ ಮನಿಯೊಳಗೆ ಅಪ್ರಸ್ತುತ ಆಗುತ್ತಿರುವ ಸೂಚನೆಗಳಾಗಿರಬಹುದೇ ಎಂದೆಲ್ಲ ನಿಟ್ಟಿಸಿರುಬಿಟ್ಟರೂ ಕ್ರಮೇಣ ಮನಸ್ಸಿನೊಳಗ ಹುಟ್ಟಿದ ಅಸಹನೆಯ ಕಾರಾ ಮೈಯೊಳಗ ಕಾವು ಹೆಚ್ಚಿ ಒಮ್ಮೆಗೇ ತಪ ತಪ ಬೆವತ. ಕೈಕಾಲು ಬಳ ಬಳ ಅಂತಂದು ಕುಸಿಯುವಂತಾದ. ಕಣ್ಣೆದುರು ಕತ್ತಲು ಗಟ್ಟಿದ್ದಷ್ಟೇ ನೆನಪು...

ಮತ್ತೆ ಎಚ್ಚರ ಬಂದಾಗ ಕಿಡಕಿವಳಗಿಂದ ಬೆಳಂ ಬೆಳಕು, ಸುತ್ತ ಮುಕುರಿದ ಮನೆಯ ಜನ, ಎಲ್ಲರ ಮಾರೀವಳಗ ಕಳವಳ–ಗಾಬರಿ!

'ಏನಾತೇ?...' ಶರಣಪ್ಪ ಬೆಪ್ಪಾಗಿ ಕೇಳಿ ಎಲ್ಲರ ಮ್ಯಾಲ ನೋಟ ಹರಿಸಿದ. ಯಾಕೆ, ಹೆಣ ಕಂಡ ಹಾಂಗ ಕಂಗಾಲಾಗೀರಲ್ಲ ಎಂದು ಕೇಳಬೇಕೆನಿಸಿತು. ಕೇಳುವ ಬದಲು ನಾನಿನ್ನೂ ಸತ್ತಿಲ್ಲ ಎಂದು ಮನದೊಳಗs ಹೇಳಿಕೊಂಡ. ಹ್ಯಾಂಗ ಸಾಯೂದು? ತನಗಿನ್ನೂ ಸಾಯುವಂಥ ವಯಸ್ಸಾಗಿಲ್ಲ, ಮಗಳಿಗೆ ಮದುವಿ ಮಾಡಬೇಕಾಗ್ಯದ, ಮಗನ ಓದು ಇನ್ನೂ ಒಂದು ದಡ ಕಂಡಿಲ್ಲ...

'ಆರಾಮಿದ್ದೀರಲ್ಲ?'

ಹೆಂಡತಿ ಹತ್ತಿರ ಕೂತವಳು ಅರ್ಧ ಅನುಮಾನ, ಅರ್ಧ ಹೆದರಿಕೆಯಿಂದ ತಲಿಮ್ಯಾಲ, ಎದಿಮ್ಯಾಲ ಕೈಯಾಡಿಸಿದಾಗ, ಅದು ಕೃತ್ರಿಮ ಅನಿಸದ್ದರಿಂದ ಶರಣಪ್ಪನಿಗೆ ಅದೇನೋ ಹಾಯಿ. ಈ ತರದ ಪ್ರೀತಿ ಅನುಭವಿಸದೆ ಬಹಳ ದಿನಗಳಾದ್ದರಿಂದ ಅಂತೂ ಇವಳಿಗೆ ತನ್ನ ಮ್ಯಾಲಿನ ಮೋಹ